ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 25/4/20

# ವೃಷಭಾವತಿ ನದಿ ತಿರುವು ಯೋಜನೆಗೆ ಹೈಕೋರ್ಟ್‌ನಿಂದ ನಿರ್ಬಂಧ

■ ವಿಕ ಸುದ್ದಿಲೋಕ ಬೆಂಗಳೂರು

ರಾಮನಗರದ ಭೈರಮಂಗಲ ಜಲಾಶಯಕ್ಕೆ ವೃಷಭಾವತಿ ನದಿ ನೀರು ಸೇರುವುದನ್ನು ತಡೆಯಲು ರೂಪಿಸಿ ರುವ ತಿರುವು ಕಾಲುವೆ ಯೋಜನೆ ಕಾಮಗಾರಿ ಸಂಬಂಧ ತಜ್ಞ ಸಂಸ್ಥೆಯ ಅಭಿಪ್ರಾಯ ಪಡೆಯುವವರೆಗೆ ಯೋಜನೆಯ ಕಾಮಗಾರಿ ಆರಂಭಿಸಬಾರದು ಎಂದು ಹೈಕೋರ್ಟ್ ನಿರ್ಬಂಧ ವಿಧಿಸಿದೆ.

ವೃಷಭಾವತಿ ನದಿ ತಿರುವು ಯೋಜನೆಯನ್ನು ಪ್ರಶ್ನಿಸಿ ಪರಿಸರವಾದಿ ಎ.ಎನ್. ಯಲ್ಲಪ್ಪ ರೆಡ್ಡಿ ಮತ್ತಿತರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಓಕ್ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

ಕೆಲ ಕಾಲ ವಾದ ಪ್ರತಿವಾದ ಆಲಿಸಿದ ನ್ಯಾಯಪೀಠ, ರಾಷ್ಟ್ರೀಯ ಪರಿಸರ ಮತ್ತು ಎಂಜನಿಯರಿಂಗ್ ಸಂಶೋಧನಾ ಸಂಸ್ಥೆ (ನೀರಿ)ಯನ್ನು ವೃಷಭಾವತಿ ನದಿ ಪುನಶ್ಚೇತನಕ್ಕಾಗಿಯೇ ನೇಮಕಗೊಳಿಸಲಾಗಿದೆ. ಹಾಗಾಗಿ, 'ನೀರಿ' ತಜ್ಞರ ಅಭಿಪ್ರಾಯ ಪಡೆಯದೆ ನದಿ ತಿರುವು ಯೋಜನೆ ಜಾರಿ ಮಾಡುವುದು ಸರಿಯಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿತು. ಅಲ್ಲದೆ, ತಜ್ಞ ಸಂಸ್ಥೆಯ ಅಭಿಪ್ರಾಯ ಪಡೆಯುವ ಸಂಬಂಧ ಸಮಾಲೋಚನೆ ನಡೆಸುವ ಕುರಿತು ತನ್ನ ನಿಲುವು ತಿಳಿಸುವಂತೆ ಹೈಕೋರ್ಟ್, ರಾಜ್ಯ ಸರಕಾರಕ್ಕೆ ನಿರ್ದೇಶನ ನೀಡಿತು.